**Code No. 18 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ಪ್ರಥಮ ಪತ್ರಿಕೆ

## ( ವೇಗ )

ಜನವರಿ, 2014

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 2 ಗಂಟೆಗಳು

ಪರಮಾವಧಿ ಅಂಕಗಳು : 100

*ಓದುವವರಿಗೆ ಸೂಚನೆಗಳು :*

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ 260 ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿರುವಂತೆ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರವರ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಂತರ ಮಾಡಲು ಸೂಚಿಸತಕ್ಕದ್ದು.

---

ಮಾನ್ಯ ಅಧ್ಯಕ್ಷರೆ,

ಇವೊತ್ತಿನ ದಿವಸ ಮಾನ್ಯ ಸದಸ್ಯರೊಬ್ಬರು
ಈ ಸಭೆಯ ಮುಂದೆ ತಂದಿರುವಂಥ ವಂದನಾ
ನಿರ್ಣಯವನ್ನು ಅನುಮೋದಿಸುತ್ತಾ ನಾನು
ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ.
$\frac{1}{4}$ ರಾ/ಜ್ಯಪಾಲರು ತಮ್ಮ ಭಾಷಣದಲ್ಲಿ
ಸರ್ಕಾರದವರು ಮುಂದಿನ ವರ್ಷ ಕೈಗೊಳ್ಳತಕ್ಕಂಥ
ಕಾರ್ಯಕ್ರಮಗಳನ್ನು ಅಪ್ಪಣೆ ಕೊಡಿಸಿದ್ದಾರೆ. ಈ
ವಿಷಯದ ಬಗ್ಗೆ ವಿರೋಧ ಪಕ್ಷದವರ ಟೀಕೆ
$\frac{1}{2}$ ಟಿಪ್ಪಣಿಗಳು/ ಸದ್ಯಕ್ಕೆ ನಮ್ಮ ಎದುರಿನಲ್ಲಿ ಇಲ್ಲ.
ಆದುದರಿಂದ ಸುಲಭದಲ್ಲಿ ನಾನು ನನ್ನ
ಮಾತುಗಳನ್ನು ಮುಗಿಸಬಹುದು. ಇವೊತ್ತು ಜನತೆ
ಹೆಚ್ಚು ಲಕ್ಷ್ಯ ಕೊಡುತ್ತಿರುವುದು ಏನೆಂದರೆ ನಮ್ಮ
$\frac{3}{4}$ ಪಕ್ಷದ ಸರ್ಕಾರ/ ಅಧಿಕಾರವನ್ನು ವಹಿಸಿಕೊಂಡು
ಸಾಮಾನ್ಯ ಜನತೆಗೆ ಹೇಳಿಕೊಂಡು ಬಂದಂತ
ಕಾರ್ಯಕ್ರಮಗಳನ್ನು ಈಡೇರಿಸಲು ಈ ಸರ್ಕಾರಕ್ಕೆ
ಸಾಮರ್ಥ್ಯ ಇದೆಯೇ ಇಲ್ಲವೇ ಎಂದು ಜನತೆ
ಒಂದು ಕಡೆ ನೋಡುತ್ತಿದೆ. ಇXನ್ನೊಂದು ಬಹು 1
ಪ್ರಾಮುಖ್ಯವಾದ ವಿಚಾರ ಏನೆಂದರೆ ಪ್ರಕೃತಿಯ
ವಿಕೋಪಕ್ಕೆ ಒಳಗಾಗಿರತಕ್ಕ ಬರಗಾಲ. ಈ
ಬರಗಾಲವನ್ನು ನಮ್ಮ ಸರ್ಕಾರವು ಯಾವ ರೀತಿ
ಎದುರಿಸುತ್ತಿದೆ. ಇನ್ನು ಮುಂದಿನ ತಿಂಗ/ಳುಗಳಲ್ಲಿ $\frac{1}{4}$
ಯಾವ ರೀತಿ ಎದುರಿಸಬೇಕಾಗಿದೆ ಎನ್ನುವಂಥ ಒಂದು
ಪ್ರಶ್ನೆ ಇದೆ. ಈ ದೇಶದಲ್ಲಿ ಬರಗಾಲ ಕಾಲಕಾಲಕ್ಕೆ
ಬರುತ್ತಿದೆ ಎಂದು ತಿಳಿದುಕೊಂಡು ಈ ಒಂದು
ಬರಗಾಲವನ್ನು ಪರಿಣಾಮ/ರಿಯಾಗಿ ಮುಂದೆ $\frac{1}{2}$
ಯಾವ ರೀತಿ ಎದುರಿಸಬೇಕು ಮತ್ತು ಯಾವ
ರೀತಿಯಿಂದ ಬರಗಾಲ ಬಂದರೂ ಕೂಡ ಜನತೆ

[ Turn over

ನೆಮ್ಮದಿಯಿಂದ ಸುಖವಾಗಿ ಬಾಳಬೇಕು ಎನ್ನುವ
ದೃಷ್ಟಿಯಿಂದ ಒಂದು ಯೋಜನೆಯನ್ನು
$\frac{3}{4}$ ಕೈಗೊಳ್ಳಬೇ/ಕು ಎನ್ನುವ ವಿಷಯವನ್ನು
ಸರ್ಕಾರದವರು ವಿಚಾರ ಮಾಡುತ್ತಿದ್ದಾರೆ. ಇವೊತ್ತು
ನಮ್ಮ ಸರ್ಕಾರದವರು ರಾಜ್ಯಪಾಲರ ಮುಖಾಂತರ
ಇಟ್ಟಂತಹ ಭಾಷಣದ ಬಗ್ಗೆ ನನಗೆ
2 ಹೆಮ್ಮೆಯುಂಟಾಗಿದೆ. ಏತಕ್ಕೆಂXದರೆ ನಾವು ಜನತೆಗೆ
ಕೊಟ್ಟಂತಹ ಆಶ್ವಾಸನೆಗಳನ್ನು ಅಥವಾ ಜನತೆಯ
ಮುಂದಿಟ್ಟಂತಹ ಕಾರ್ಯಕ್ರಮಗಳನ್ನು ಮನಸಾರೆ
ಒಪ್ಪಿಕೊಂಡು ಸರ್ಕಾರದವರು ಕಾರ್ಯಪ್ರವೃತ್ತ
4 ರಾಗುತ್ತಿದ್ದಾರೆ ಎನ್ನುವು/ದನ್ನು ಸರಿಯಾಗಿ ಈ
ಭಾಷಣದಲ್ಲಿ ನಿವೇದನೆ ಮಾಡಿದ್ದಾರೆ. ಈ
ಕೆಲಸಗಳನ್ನು ಮಾಡತಕ್ಕ ಒಂದು ವೇಗ ಅಷ್ಟೊಂದು
ಸರಿಯಾಗಿ ಕಾಣದಿದ್ದರೂ ಕೂಡ ನಾವು
$\frac{1}{2}$ ಚುನಾವಣೆಯ ಕಾಲದಲ್ಲಿ ಜನತೆಯ ಮು/ಂದೆ
ಇಟ್ಟಂತಹ ಕಾರ್ಯಕ್ರಮಗಳನ್ನು ನಾವು
ನಡೆಸಿಕೊಂಡು ಬಾರದಿದ್ದರೆ ಜನತೆಗೆ ಅಸಮಾಧಾನ
ಉಂಟಾಗುತ್ತದೆ ಎನ್ನುವ ಕಲ್ಪನೆಯನ್ನು
ಇಟ್ಟುಕೊಂಡು ಕೆಲಸಗಳನ್ನು ನಡೆಸಿಕೊಂಡು
$\frac{3}{4}$ ಬರುತ್ತಿದ್ದೇ/ವೆ ಎಂದು ಈ ಸನ್ನಿವೇಶದಲ್ಲಿ ನಾವು
ಹೆಮ್ಮೆಯಿಂದ ಹೇಳಬೇಕಾಗಿದೆ. ಇವೊತ್ತು ನಾವು
ಈ ಭಾಷಣದಲ್ಲಿ ಹೇಳಿರುವಂತಹ ವಿಷಯಗಳನ್ನು
ಮತ್ತು ನಾವು ಆ ಹೊತ್ತು ಜನತೆಗೆ ಹೇಳಿದಂತಹ
3 ವಿಷಯಗXಳನ್ನು ನೋಡಿದರೆ ನಾವು ಇನ್ನೂ ಸ್ವಲ್ಪ
ಹೆಚ್ಚು ವೇಗದಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬುದು
ಗೊತ್ತಾಗುತ್ತದೆ. ನಾವು ಚುನಾವಣೆಯ ಕಾಲದಲ್ಲಿ
ಜನತೆಗೆ ಕೊಟ್ಟಂತಹ ಆಶ್ವಾಸನೆಗಳಲ್ಲಿ ಬಡವ
ಮತ್ತು/ ಶ್ರೀಮಂತರ ಮಧ್ಯೆ ಇರುವ ಅಂತರವನ್ನು $\frac{1}{4}$
ಕಡಿಮೆ ಮಾಡುವುದು ಬಹಳ ಪ್ರಾಮುಖ್ಯವಾದ
ವಿಚಾರ. ಈ ಕಾರ್ಯಕ್ರಮಕ್ಕೆ ಅನುಗುಣವಾಗಿ
ಯಾವ ಯಾವ ಕಾರ್ಯಕ್ರಮಗಳನ್ನು
ಹಾಕಿಕೊಳ್ಳಬೇಕೋ ಅವುಗಳ/ನ್ನು ಹಾಕಿಕೊಂಡು $\frac{1}{2}$
ಸರ್ಕಾರದವರು ದಿಟ್ಟತನದಿಂದ ಹೆಜ್ಜೆಯನ್ನಿಟ್ಟು
ಕೆಲಸವನ್ನು ಮಾಡಬೇಕಾಗಿದೆ. ಆ ದಿಶೆಯಲ್ಲಿ ನಮ್ಮ
ಸರ್ಕಾರ ಒಂದು ಬಲವಾದ ದಿಟ್ಟ ಹೆಜ್ಜೆಯನ್ನು
ಇಟ್ಟಿದೆ ಎಂದು ನಾವು ಒಂದು ಧೈ/ರ್ಯವನ್ನು $\frac{3}{4}$
ತಾಳಬಹುದೆಂದು ನಾನು ಈ ಸಂದರ್ಭದಲ್ಲಿ
ಹೇಳಬಯಸುತ್ತೇನೆ.

ಇನ್ನು ಪಂಚವಾರ್ಷಿಕ ಯೋಜನೆಯ ಬಗ್ಗೆ
ಹೇಳಬೇಕಾದರೆ ಹಿಂದಿನ ಸರ್ಕಾರದವರು ಎಷ್ಟೇ
ಶಕ್ತಿಯುತವಾಗಿ ನಾಲ್ಕು ಪಂಚವಾXರ್ಷಿಕ 4
ಯೋಜನೆಗಳನ್ನು ಹಾಕಿಕೊಂಡು ಅದರ ಮುಖಾಂತರ
ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ
ಕಾರ್ಯಗಳನ್ನು ಮಾಡಿದರೂ ಕೂಡ
ಬಹುಮುಖ್ಯವಾಗಿ ಜನರ ಆಗುಹೋಗುಗಳ ಮೇಲೆ
ಆಗಬೇಕಾ/ದ ಪರಿಣಾಮ ಆಗಿಲ್ಲ. ಆದ್ದರಿಂದ $\frac{1}{4}$
ಐದನೇ ಪಂಚವಾರ್ಷಿಕ ಯೋಜನೆಯಲ್ಲಿ
ಪ್ರತಿಯೊಬ್ಬ ಮನುಷ್ಯನೂ ಕೂಡ ತನ್ನ ಕಾಲಮೇಲೆ

ನಿಂತು ದುಡಿಮೆ ಮಾಡತಕ್ಕಂಥಾ ಅವಕಾಶವನ್ನು
$\frac{1}{2}$ ಕಲ್ಪಿಸಿಕೊಡುವ ರೀತಿ/ಯಲ್ಲಿ ಮುಂದಿನ
ಪಂಚವಾರ್ಷಿಕ ಯೋಜನೆಯನ್ನು ರೂಪಿಸಬೇಕೆಂದು
ನಾನು ಈ ಸಂದರ್ಭದಲ್ಲಿ ವಿನಂತಿ
ಮಾಡಿಕೊಳ್ಳುತ್ತೇನೆ. ಹೀಗೆ ಮಾಡಿದರೆ ಮಾತ್ರ ಜನತೆ
ನಮ್ಮ ಮೇಲೆ ಇಟ್ಟಂತಹ ಅಭಿಮಾನ ಮತ್ತು
$\frac{3}{4}$ ವಿಶ್ವಾ/ಸವು ಇನ್ನು ಮುಂದೆಯೂ ಹೆಚ್ಚಾಗುತ್ತದೆ
ಎಂದು ನಾನು ಈ ಸನ್ನಿವೇಶದಲ್ಲಿ
ಹೇಳಲಿಚ್ಛಿಸುತ್ತೇನೆ. ಇವೊತ್ತು ನಾನು ವಿರೋಧ
ಪಕ್ಷದವರಿಗೆ ನೀವು ಗಾಜಿನ ಮನೆಯಲ್ಲಿ
5 ಕುಳಿತುಕೊಂಡು ಇನ್ನೊಬ್ಬರ ಮನೆಯX ಮೇಲೆ
ಕಲ್ಲು ಎಸೆಯುವುದು ತಪ್ಪು ಎಂದು ಹೇಳುತ್ತೇನೆ.
ಏಕೆಂದರೆ ಇವೊತ್ತು ನಮ್ಮಲ್ಲಿ ಕೆಲವು ತಪ್ಪುಗಳು
ಇವೆ ಎಂದು ಅವರು ಹೇಳಬಹುದು. ಆದರೆ ಅವರು
$\frac{1}{4}$ ಮಾಡಿದಷ್ಟು ತಪ್ಪುಗಳನ್ನು ನಾವು ಮಾಡು/ವುದಿಲ್ಲ.
ಅವರು ತಾವು ಮಾಡುವ ತಪ್ಪುಗಳನ್ನು
ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ
ಅಸಮರ್ಥರಾಗಿದ್ದಾರೆ. ಅವರು ಮಾಡಿದಂತಹ
ತಪ್ಪುಗಳನ್ನು ನಾವು ಮಾಡಿಲ್ಲವೆಂದು ಧೈರ್ಯವಾಗಿ
$\frac{1}{2}$ ಹೇಳಬಯ/ಸುತ್ತೇನೆ.

ಇನ್ನು ಬರಗಾಲ ಪರಿಸ್ಥಿತಿಯ ಬಗ್ಗೆ ಹಿಂದೆ ಈ
ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಮುಂದೆ
ಕೂಡ ಈ ಸಭೆಯಲ್ಲಿ ಈ ಅಧಿವೇಶನದಲ್ಲಿ ಬರಗಾಲ
$\frac{3}{4}$ ಪರಿಸ್ಥಿತಿಯ ಬಗ್ಗೆ ಚರ್ಚೆಯನ್ನು ಮಾಡ/ಬೇಕಾಗಿದೆ.
ಆದರೆ ಈ ಬರಗಾಲ ಪರಿಸ್ಥಿತಿಯ ಬಗ್ಗೆ ನಾನು
ಸ್ಪಷ್ಟವಾಗಿ ಹೇಳುತ್ತೇನೆ. ವಿರೋಧ ಪಕ್ಷದವರು ಈ
ಬರಗಾಲ ಪರಿಸ್ಥಿತಿಯನ್ನು ರಾಜಕೀಯವಾಗಿ
ಉಪಯೋಗ ಮಾಡಿಕೊಳ್ಳುತ್ತಿದ್ದಾರೆX ಎಂದು 6
ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ
ಬರಗಾಲ ಪರಿಸ್ಥಿತಿಯು ಹಲವಾರು ಶತಮಾನಗಳಿಂದ
ನಮ್ಮ ರಾಜ್ಯದಲ್ಲಿ ಹಾಗೂ ಇತರೆ ರಾಜ್ಯಗಳಲ್ಲಿ
ಒಂದಲ್ಲ ಒಂದು ಕ್ಷೇತ್ರದಲ್ಲಿ ಇದ್ದೇ/ ಇರುತ್ತದೆ. $\frac{1}{4}$
ಇಂಥ ಬರಗಾಲ ನಮ್ಮ ದೇಶದಲ್ಲಿ ಹಿಂದಿನಿಂದಲೂ
ಬಂದಿದ್ದಲ್ಲ. ಆದರೆ ಇಂಥಾ ಬರಗಾಲ ಪರಿಸ್ಥಿತಿಯು
ಬಂದರೆ ಆಗ ಬರಗಾಲ ಪ್ರದೇಶದಲ್ಲಿನ ಪ್ರತಿಯೊಬ್ಬ
ಮನುಷ್ಯನಿಗೂ ಯಾವ/ ರೀತಿ ಆಹಾರವನ್ನು $\frac{1}{2}$
ಒದಗಿಸಬೇಕು ಎನ್ನತಕ್ಕಂತ ಮತ್ತು ಯಾವ
ರೀತಿಯಲ್ಲಿ ಶಾಶ್ವತವಾದ ಪರಿಹಾರ
ಕಾರ್ಯಕ್ರಮಗಳನ್ನು ಹಾಕಿಕೊಂಡು ಅದರಂತೆ
ನಡೆದುಕೊಳ್ಳಬೇಕೆಂಬ ಬಗ್ಗೆ ಯೋಜನೆಯನ್ನು/ $\frac{3}{4}$
ರೂಪಿಸಿಕೊಳ್ಳಬೇಕೆಂಬ ಸಲಹೆಯನ್ನು ನಾನು ಈ
ಸಂದರ್ಭದಲ್ಲಿ ನೀಡಲು ಬಯಸುತ್ತೇನೆ. ನನಗೆ
ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ
ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು
ಮುಗಿಸುತ್ತೇನೆ.X 7

ಮಾನ್ಯರೆ, ಹಿಂದೆ ಶ್ರೀ ದೇವರಾಜ ಅರಸರ
ಕಾಲದಲ್ಲಿ ಶಾಸಕರು ಪಕ್ಷಾಂತರ ಮಾಡದಂತೆ
ಹಿಡಿತದಲ್ಲಿಟ್ಟುಕೊಳ್ಳಲು ಕೆಲವು ಅನಗತ್ಯ
ಮಂಡಲಿಗಳನ್ನು ಮತ್ತು ನಿಗಮಗಳನ್ನು ಹುಟ್ಟು
ಹಾಕಿ/ ಅದರ ಅಧ್ಯಕ್ಷಗಿರಿಗೆ, ಸಚಿವ ಸ್ಥಾನ ಸಿಗದ $\frac{1}{4}$

[ Turn over

ಶಾಸಕರುಗಳನ್ನು ನೇಮಿಸಿ ಅವರುಗಳಿಗೆ ಸಚಿವರಿಗೆ
ಇರುವಂತೆ ಕಾರು, ಬಂಗಲೆ, ಭತ್ಯೆ ಮುಂತಾದ
$\frac{1}{2}$ ಸವಲತ್ತುಗಳನ್ನು ಒದಗಿಸಿ ರಾಜ್ಯ/ ಸರ್ಕಾರದ
ಬೊಕ್ಕಸಕ್ಕೆ ಹಲವು ಕೋಟಿ ರೂಪಾಯಿಗಳ ಅನಗತ್ಯ
ವೆಚ್ಚವನ್ನು ಉಂಟುಮಾಡುತ್ತಿದ್ದರು. ಇಷ್ಟಾದರೂ
ಇವುಗಳಿಂದ ರಾಜ್ಯದ ಜನತೆಗೆ ಯಾವುದೇ
$\frac{3}{4}$ ಪ್ರಯೋಜನವಾಗದೆ ಸರ್ಕಾರದ ಬೊಕ್ಕ/ಸಕ್ಕೆ
ಅನಾವಶ್ಯಕ ವೆಚ್ಚವಾಗುತ್ತಿತ್ತು.

ಈಗ ರಾಜ್ಯದಲ್ಲಿ ಜನತಾ ಪಕ್ಷವು ಹೆಚ್ಚಿನ
ಸ್ಥಾನಗಳನ್ನು ಗಳಿಸಿ ನಿಚ್ಚಳ ಬಹುಮತ
ಪಡೆದಿರುವುದರಿಂದಲೂ ಮತ್ತು ಪಕ್ಷಾಂತರ ನಿಷೇಧ
8 ಕಾನೂನು ಜಾXರಿಗೆ ಬಂದಿರುವುದರಿಂದಲೂ
ಮೌಲ್ಯಾಧಾರಿತ ರಾಜಕೀಯಕ್ಕೆ ಬದ್ಧವಾಗಿರುವಂತ
ಜನತಾ ಸರ್ಕಾರವು ಈ ಅನಗತ್ಯ ಮಂಡಲಿ
ಮತ್ತು ನಿಗಮಗಳನ್ನು ರದ್ದುಪಡಿಸಿ ರಾಜ್ಯದ
$\frac{1}{4}$ ಬೊಕ್ಕಸಕ್ಕೆ ಆಗುತ್ತಿ/ರುವ ಅನಾವಶ್ಯಕ ವೆಚ್ಚಗಳನ್ನು
ತಗ್ಗಿಸಿ ಅದೇ ಹಣವನ್ನು ರಾಜ್ಯದ ಜನರ
ಕಲ್ಯಾಣಕ್ಕಾಗಿ ಬಳಸಲಿ. ಎರಡನೆಯದಾಗಿ,
ಕರ್ನಾಟಕದಲ್ಲಿ ವಿದ್ಯುತ್ ಕೊರತೆಯಿಂದಾಗಿ
$\frac{1}{2}$ ಕೈಗಾರಿಕೋದ್ಯಮಿಗ/ಳಿಂದ ಮೊದಲುಗೊಂಡು
ಸಾಮಾನ್ಯ ಜನರೂ ತೊಂದರೆಗೆ ಒಳಗಾಗಿರುವುದು
ಸರ್ವವಿಧಿತ. ಅವರ ಒಲವನ್ನು ಗಳಿಸಿ ಈಗ ಮತ್ತೆ
ಅಧಿಕಾರಕ್ಕೆ ಬಂದಿರುವ ಜನತಾ ಸರ್ಕಾರ ಈ
ಸಮಸ್ಯೆಯನ್ನು ತೀ/ವ್ರವಾಗಿ ಗಣನೆಗೆ $\frac{3}{4}$
ತೆಗೆದುಕೊಂಡು ಕೇಂದ್ರ ಸರ್ಕಾರ ಕರ್ನಾಟಕದಲ್ಲಿ
ಅಣುವಿದ್ಯುತ್ ಸ್ಥಾವರ ಸ್ಥಾಪಿಸುವ ತೀರ್ಮಾನದ
ಬಗ್ಗೆ ತುಂಬು ಹೃದಯದ ಸ್ವಾಗತ ನೀಡಿದೆ.

ಆದರೆ ಅಣುವಿದ್ಯುತ್ ಸ್ಥಾವರ ಸ್ಥಾXಪಿಸಿದರೆ 9
ಅದರಿಂದ ಉಂಟಾಗುವ ವಾಯುಮಾಲಿನ್ಯ
ಅನಾರೋಗ್ಯಕರ ವಾತಾವರಣ ಮುಂತಾದವುಗಳು
ಊಹಿಸಲು ಸಹ ಅಸಾಧ್ಯವಾಗಿದೆ. ಅಣುವಿದ್ಯುತ್
ಸ್ಥಾವರಗಳು ಕಡಿಮೆ ಖರ್ಚಿನಲ್ಲಿ ವಿದ್ಯು/ಚ್ಛಕ್ತಿ $\frac{1}{4}$
ಯನ್ನು ಉತ್ಪಾದಿಸುತ್ತವೆ ಅನ್ನುವ ನಂಬಿಕೆ
ಅರ್ಥವಿಲ್ಲದ್ದು. ಇದಕ್ಕಿಂತಲೂ ಹೆಚ್ಚಿನ
ವಿದ್ಯುಚ್ಛಕ್ತಿಯನ್ನು ತಯಾರಿಸುವ ಸರಳ ಹಾಗೂ
ಅಪಾಯವಿಲ್ಲದ ಅನೇಕ ವಿಧಾನಗಳನ್ನು ನಮ್ಮ
ವಿಜ್ಞಾನಿ/ಗಳು ಕಂಡುಹಿಡಿದಿದ್ದಾರೆ. ಪರಿಸರವನ್ನು $\frac{1}{2}$
ಮಾಲಿನ್ಯಗೊಳಿಸಿ ಮನುಷ್ಯ ಕುಲವನ್ನೇ
ನಾಶಪಡಿಸುವ ಅಣುವಿದ್ಯುತ್ ಸ್ಥಾವರಗಳಿಗೆ
ಬದಲಾಗಿ ಪರಿಸರ ಶುದ್ಧತೆ ಕಾಪಾಡಿಕೊಂಡು
ಕಡಿಮೆ ಖ/ರ್ಚಿನಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿಯನ್ನು $\frac{3}{4}$
ತಯಾರಿಸುವ ವಿಧಾನಗಳಾದ ಕಲ್ಲಿದ್ದಲು, ನೀರು
ಮುಂತಾದ ಮೂಲಗಳಿಂದ ವಿದ್ಯುತ್ತನ್ನು
ಉತ್ಪಾದಿಸುವತ್ತ ಜನತಾ ಸರ್ಕಾರ
ಗಮನಹರಿಸಲೆಂದು ಆಶಿಸುತ್ತೇನೆ.X 10